ಕೊರೊನಾ ನಂತರ ಡಿಜಿಟಲ್ ಮಾರ್ಕೆಟಿಂಗ್ ಹೆಚ್ಚಾಗಿದೆ. ಸಿನಿಮಾ ಬಜೆಟ್‌ಗಿಂತ ಮಾರ್ಕೆಟಿಂಗ್ ಬಜೆಟ್ ಜಾಸ್ತಿಯಾಗಿದೆ. ಅದೇ ದೊಡ್ಡ ಸವಾಲು. ಕೊರೊನಾ ನಂತರ, ಸಿನಿಮಾ ಪ್ರೊಮೋಷನ್‌ಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲು ಆರಂಭಿಸಿದರು. ಎಲ್ಲರಿಗೂ ಇದು ಸಾಧ್ಯವಿಲ್ಲ. ಈಗ ಸಿನಿಮಾ ವಜ್ರದ ವ್ಯಾಪಾರದಂತಾಗಿದೆ. ಈ ವರ್ತುಲದಿಂದ ಹೊರಗೆ ಬರಲು ಸಾಧ್ಯವೇ ಇಲ್ಲವೇನೋ ಎಂದು ಅನ್ನಿಸಿಬಿಟ್ಟಿದೆ. ಆದರೆ ಇದರಿಂದ ಹೊರಬರಲು ಇರುವ ಒಂದೇ ದಾರಿ, ಅತ್ಯುತ್ತಮ ಸಿನಿಮಾ ನೀಡುವುದು.

◆ **ಸಿನಿಮಾರಂಗ ಬಿಕ್ಕಟ್ಟಿನಲ್ಲಿದೆ. ಪ್ಯಾರಲಲ್ ಸಿನಿಮಾಗಳಿಗೆ ಹಣ ಹಾಕುವವರೇ ಇಲ್ಲ ಎಂಬಂತಾಗಿದೆ. ನಿಮ್ಮ ಅಭಿಪ್ರಾಯ?**

ಇದೊಂದು ರೀತಿ ಯುದ್ಧ ಮಾಡಿದಂತೆ. ಆದರೆ ಸಿನಿಮಾ ತಾಕತ್ತೇನೆಂದರೆ, ಅದು ಇಂದಿಗೆ ಮೂಲೆಗುಂಪಾಗಿದ್ದರೂ ಸದಭಿರುಚಿಯ ಪ್ರೇಕ್ಷಕರಿಗೆ ಎಂದಿಗಾದರೂ ಇಷ್ಟ ಆಗಿಯೇ ಆಗುತ್ತದೆ. ಹತ್ತು ವರ್ಷ ಕಳೆದಾದರೂ ಜನಕ್ಕೆ ಗೊತ್ತಾಗುತ್ತದೆ. ಸಿನಿಮಾ ಬದುಕುತ್ತೆ. ಸಿನಿಮಾ ಮಾಡಿದೋರೇ ಮೂಲೆಗುಂಪಾಗಿರುತ್ತಾರೆ. ಚಿತ್ರರಂಗದ ವೈಚಿತ್ರ್ಯವಿದು.

◆ **ಸ್ವತಂತ್ರವಾಗಿ ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಳ್ಳುವ ನಿರ್ಮಾಪಕರ ಸಂಖ್ಯೆ ತಗ್ಗಿದೆಯೇ? ಈ ಬೆಳವಣಿಗೆ ಚಿತ್ರರಂಗದ ಮೇಲೆ ಯಾವ ಪರಿಣಾಮ ಬೀರಬಹುದು?**

ಕನ್ನಡದ ಮಟ್ಟಿಗೆ ಮಾತನಾಡುವುದಾದರೆ, ವರ್ಷಕ್ಕೆ 300 ಸಿನಿಮಾಗಳು ರಿಲೀಸ್ ಆದರೆ, ಅದರಲ್ಲಿ 295 ಸಿನಿಮಾಗಳಿಗೆ ನಿರ್ಮಾಪಕರು ಹೊಸಬರೇ ಇರುತ್ತಾರೆ. ದುಡ್ಡಿದೆ ಎಂಬ ಒಂದೇ ಕಾರಣಕ್ಕೆ ಬೇರೆ ಕ್ಷೇತ್ರದಿಂದ ಸಿನಿಮಾ ನಿರ್ಮಾಣಕ್ಕೆ ಬಂದಿರುತ್ತಾರೆ. ಅವರಿಗೆ ಸಿನಿಮಾ ಬಗ್ಗೆ ಗೊತ್ತಿರುವುದಿಲ್ಲ. ಸಿನಿಮಾ ಹಾಗೂ ಸಿನಿಮಾ ಬಿಸಿನೆಸ್ ಬಗ್ಗೆ ಇಂಚಿಂಚೂ ತಿಳಿದುಕೊಂಡಿರುವ ನಿರ್ಮಾಪಕ ಎಂದಿಗೂ ಲಾಸ್ ಮಾಡಿಕೊಳ್ಳಲ್ಲ. ದುಡ್ಡಿದೆ ಎಂದು ನಿರ್ಮಾಣಕ್ಕೆ ಇಳಿದವರು ಸಿನಿಮಾ ಮಾರ್ಕೆಟ್‌ನಲ್ಲಿ ಏನು ಓಡುತ್ತಿದೆಯೋ ಅದರ ಮೇಲೆ ಚಿತ್ರ ಮಾಡಲು ಹೇಳುತ್ತಾರೆ. ಆಗ ಕಲಾತ್ಮಕತೆ ಎಲ್ಲಿಂದ ಬರಲು ಸಾಧ್ಯ? ಸಿನಿಮಾ ಒಂದು ಉತ್ಪನ್ನ ಆಗುತ್ತದಷ್ಟೆ.

◆ **ನಿಮ್ಮ ಮುಂದಿನ ಯೋಜನೆ?**

ಸಿನಿಮಾ ನಿರ್ದೇಶನ, ಬರವಣಿಗೆ, ಪ್ರೊಡಕ್ಷನ್, ನಮ್ಮದೇ ವಿತರಣೆ ಕೂಡ ಇದೆ. ಅತ್ಯುತ್ತಮ ಸಿನಿಮಾಗಳನ್ನು ಮಾಡುವುದಷ್ಟೇ ನನ್ನಾಸೆ.

ಪ್ರತಿಕ್ರಿಯಿಸಿ: feedback@sudha.co.in

# ಹೊಸ ಅಲೆಯಲ್ಲಿ ಮಾನ್ವಿತಾ



ನಟಿ ಮಾನ್ವಿತಾ ಹರೀಶ್ ಹೊಸ ಸಿನಿಮಾ ತಂಡದೊಂದಿಗೆ ಮುಂದಿನ ಹೆಜ್ಜೆ ಇಡಲು ಅಣಿಯಾಗಿದ್ದಾರೆ. ಸದ್ಯ 'ಒನ್ ಅಂಡ್ ಆಫ್' ಸಿನಿಮಾದಲ್ಲಿ ತೊಡಗಿಕೊಂಡಿದ್ದಾರೆ.

ಈ ಸಿನಿಮಾ ತಮಗೇಕೆ ಇಷ್ಟವಾಯಿತು ಎಂಬುದನ್ನೂ ಮಾನ್ವಿತಾ ವಿವರಿಸಿದ್ದಾರೆ. 'ಈ ಸಿನಿಮಾ ಮಾಡಲು ತುಂಬಾ ಕಾರಣಗಳಿವೆ. ಶ್ರೇಯಸ್ ಹೇಳಿದ ಕಥೆ ಇಷ್ಟವಾಯ್ತು. ಅವರು ಒಳ್ಳೆಯ ನಟ, ಬರಹಗಾರ. ಒಳ್ಳೆಯ ತಂಡದ ಜೊತೆ ಕೆಲಸ ಮಾಡುತ್ತಿರುವ ಅನುಭವ. ನನ್ನ ಪಾತ್ರದ ಹೆಸರು ನಿಧಿ. ನಿಧಿ ಟ್ರಬಲ್ ಮೇಕರ್' ಎಂದಿದ್ದಾರೆ.

'ರಂಗ್‌ಬಿರಂಗಿ', 'ದಿ ವೆಕೆಂಟ್ ಹೌಸ್' ಸಿನಿಮಾಗಳ ಮೂಲಕ ಭರವಸೆ ಮೂಡಿಸಿರುವ ಶ್ರೇಯಸ್ ಚಿಂಗಾ, 'ಒನ್ ಅಂಡ್ ಆಫ್' ಸಿನಿಮಾ ಮೂಲಕ ನಿರ್ದೇಶನಕ್ಕೆ ಇಳಿದಿದ್ದಾರೆ. ನಿರ್ದೇಶನದ ಜೊತೆ ನಾಯಕನಾಗಿಯೂ ಅಭಿನಯಿಸುತ್ತಿದ್ದಾರೆ.

ಇದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ ಆಗಿದ್ದು, ಶ್ರೇಯಸ್ ಚಿಂಗಾ, ಮಾನ್ವಿತಾ ಹರೀಶ್ ಕಾಮತ್ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ■

# ಕುದುರೆ ಸವಾರಿ ಹೊರಟ ಸಪ್ತಮಿ

'ಕಾಂತಾರ' ಸಿನಿಮಾ ಖ್ಯಾತಿಯ ನಟಿ ಸಪ್ತಮಿ ಗೌಡ ಕುದುರೆ ಸವಾರಿ ಹೊರಟಿದ್ದಾರೆ. ಬರೀ ಸವಾರಿ ಮಾತ್ರವಲ್ಲ, ವೃತ್ತಿಪರವಾಗಿಯೂ ಕುದುರೆ ಸವಾರಿ ಕಲಿಯುವುದಾಗಿ ಹೇಳಿಕೊಂಡಿದ್ದಾರೆ.

ತೆಲುಗು ಸಿನಿಮಾವೊಂದರ ಪ್ರಯುಕ್ತ ಕುದುರೆ ಸವಾರಿ ಅಭ್ಯಾಸ ಮಾಡುತ್ತಿರುವ ಸಪ್ತಮಿ, ಕಲಿಯುತ್ತಾ ಕಲಿಯುತ್ತಾ ಇದು ತಮ್ಮ ಮೆಚ್ಚಿನ ಕ್ರೀಡೆಯೂ ಆಗಿಹೋಗಿದೆ ಎಂದಿದ್ದಾರೆ. 'ತಮ್ಮುಡು' ತೆಲುಗು ಸಿನಿಮಾದಲ್ಲಿ ನಿತಿನ್ ಜೊತೆ ಕಾಣಿಸಿಕೊಳ್ಳುತ್ತಿರುವ ಸಪ್ತಮಿ, ತಮ್ಮ ಪಾತ್ರಕ್ಕೆ ಕುದುರೆ ಸವಾರಿ ಕಲಿಯುವುದು ಅವಶ್ಯವಿತ್ತು. ಹೀಗಾಗಿ ನಲವತ್ತು ದಿನಗಳ ಅಭ್ಯಾಸವನ್ನು ಮಾಡುತ್ತಿದ್ದಾರೆ.

ಬೆಂಗಳೂರಿನ ಜೆ.ಪಿ ನಗರದಲ್ಲಿ ತರಬೇತಿ ಪಡೆಯುತ್ತಿದ್ದು, ಈ ಕಲಿಕೆ ತಮ್ಮಲ್ಲಿ ಬೇರೆಯದೇ ಹಂತದ ಬದ್ಧತೆ ತಂದಿರುವುದಾಗಿ ಹೇಳಿದ್ದಾರೆ. ಸಿನಿಮಾದಲ್ಲಿ ಡ್ಯೂಪ್ ಬಳಸುವ ಆಯ್ಕೆಯಿದ್ದರೂ ಈ ಕೌಶಲವನ್ನು ತಾವೇ ಅಳವಡಿಸಿಕೊಳ್ಳಲು ಸಪ್ತಮಿ ಉತ್ಸಾಹ ತೋರಿದ್ದಾರಂತೆ.

'ನಿರೀಕ್ಷಿಸಿದ್ದಕ್ಕಿಂತ ಬೇಗ ಕುದುರೆ ಸವಾರಿ ಕಲಿತಿದ್ದೇನೆ. ಇದೀಗ ಬೆಟ್ಟ ಗುಡ್ಡಗಳ ಮೇಲೆ ಕುದುರೆ ಓಡಿಸುವುದನ್ನು ಕಲಿಯುತ್ತಿದ್ದೇನೆ. ಇದೇನು ಸಿನಿಮಾಗೆ ಅವಶ್ಯಕತೆಯಿಲ್ಲ. ಆದರೂ ನನ್ನ ಕಲಿಕೆ ಮುಂದುವರೆಸಿದ್ದೇನೆ. ನಟನೆಯೊಂದಿಗೆ ವೃತ್ತಿಪರವಾಗಿಯೂ ಸವಾರಿ ಕಲಿಯುತ್ತೇನೆ' ಎಂದು ಹೇಳಿದ್ದಾರೆ.

'ಕೆಲವು ಕುದುರೆಗಳು ಮೂಡಿಯಾಗಿರುತ್ತವೆ. ಕೆಲವು ಸೋಮಾರಿ. ಇನ್ನೂ ಕೆಲವು ಅತಿಯಾಗಿ ಆ್ಯಕ್ಟಿವ್ ಆಗಿರುತ್ತವೆ. ನನ್ನ ಕುದುರೆ 'ಸೋಲಾರ್' ಚುರುಕಾಗಿದೆ' ಎಂದು ಕುದುರೆಗಳ ಬಗ್ಗೆಯೂ ವಿವರಿಸಿದ್ದಾರೆ. ■

